**<u>ದಿನಾಂಕಃ 14.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ</u> ವಾದಿ ಪರ ವಕೀಲರಿಂದ**

4 ನೇ ಪ್ರತಿವಾದಿಯು ನನ್ನ ತಂಗಿ. ನನಗೆ ಹಾಗೂ 4 ನೇ ಪ್ರತಿವಾದಿಗೆ ಜಂಟಿಯಾಗಿ ಜಿ ಪಿ ಎ ಆಗಿರುತ್ತದೆ ಎಂದರೆ ಸರಿ. 5 ನೇ ಪ್ರತಿವಾದಿಯು ನನ್ನ ಹೆಂಡತಿ. ಜಿ ಪಿ ಎ ಯನ್ನು ಜಮೀನನ್ನು ಪಡೆದುಕೊಳ್ಳುವ ಉದ್ದೇಶದಿಂದ ಮಾಡಿಸಿಕೊಳ್ಳಲಾಯಿತು. 2008 ಜಿ ಪಿ ಎ ಯನ್ನು ಮಾಡಿಸಿಕೊಳ್ಳುವ ಸಮಯಕ್ಕೆ ಪೂಜಪ್ಪ ಹಾಗೂ ಅವರ ಕುಟುಂಬದವರಿಂದ ಪಹಣಿ, ವಿಭಾಗ ಪತ್ರ, ವಂಶವೃಕ್ಷ ಹಾಗೂ ಪರವಾನಿಗೆ ಪತ್ರವನ್ನು ಪಡೆದಿರುತ್ತೇವೆ. ಪೂಜಪ್ಪನವರ ಮಕ್ಕಳು ಹಾಗೂ ಅವರ ಕುಟುಂಬದವರು ಯಾರೆಂದು ಯಾರೆಂದು ತೋರಿಸಲು ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ. ಆ ಸಮಯದಲ್ಲಿ ವಾದಿಗೆ 12 ವರ್ಷ, 1 ನೇ ಪ್ರತಿವಾದಿಗೆ 30 ವರ್ಷ, ಆಶಾರಾಣಿಯವರಿಗೆ 25 ವರ್ಷ, ಹನುಮಂತರಾಯಪ್ಪನಿಗೆ 35 ವರ್ಷವಾಗಿತ್ತು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಕ್ರಯಪತ್ರ ಮಾಡಿಕೊಳ್ಳಲು ತೊಂದರೆ ಇತ್ತಾ ಎಂದರೆ 1 ಹಾಗೂ 2 ಗುಂಟೆ ಜಾಗವನ್ನು ಪಡೆಯಲು ಅನುಮತಿ ಇರಲಿಲ್ಲ. ಸದರಿ ವಿಷಯವನ್ನು ನನ್ನ ಪ್ರತಿವಾದಪತ್ರದಲ್ಲಿ ಹಾಗೂ ಸಾಕ್ಷ್ಯ ಪ್ರಮಾಣಪತ್ರದಲ್ಲಿ ತಿಳಿಸಿರುವುದಿಲ್ಲವೆಂದರೆ ಸರಿ.

ಜಿ ಪಿ ಎ ನಲ್ಲಿ ಹಣ ಸಂದಾಯವಾದ ಬಗ್ಗೆ ನಮೂದು ಇರುತ್ತದೆ. ಆ ಜಿ ಪಿ ಎ ನಲ್ಲಿ ಅನುಸೂಚಿಸ್ವತ್ತಿನ ಮಾರುಕಟ್ಟೆ ಬೆಲೆಯು ಮಾತ್ರ ನಮೂದು ಆಗಿರುತ್ತದೆ, ಹಣ ಸಂದಾಯವಾದ ಬಗ್ಗೆ ನಮೂದು ಇರುವುದಿಲ್ಲವೆಂದರೆ ಸರಿಯಲ್ಲ. ನಿಡಿ-1 ರ ದಾಖಲೆಯಲ್ಲಿ ಇರುವ 6 ನೇ ಷರತ್ತಿನಂತೆ ನಾನು ಸದರಿ ದಾಖಲೆಯ ಅನುಸೂಚಿಸ್ವತ್ತಿಗೆ ಭೂಪರಿವರ್ತನೆ ಮಾಡಿಸಿರುವುದಿಲ್ಲ. ನಾನು ಸೈಟ್ ಗಳನ್ನು ಪಡೆದು ಅವುಗಳಿಗೆ ನಕ್ಷೆಯನ್ನು ಮಾಡಿಸಿರುತ್ತೇನೆ. ದಾವಾಸ್ವತ್ತು ಸರ್ವೇ ನಂ. ನಲ್ಲಿಯೆ ಇರುತ್ತದೆ. ಅದರ ವಿಸ್ತೀರ್ಣ 1.8 ಗುಂಟೆ ಆಗಿರುತ್ತದೆ, ಅದನ್ನು ಸರ್ವೇಯರ್ ಬಳಿ ಅಳತೆ ಮಾಡಿಸಿರುತ್ತೇನೆ, ಮಾಡಿಸಿದ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಿಡಿ-1 ರಲ್ಲಿ ನಮೂದಿಸಿದ ಕಾರ್ಯಾಗಳನ್ನು ಮಾಡಿರುವುದಿಲ್ಲವೆಂದರೆ ಸರಿಯಲ್ಲ.

2013 ರಲ್ಲಿ ನಾನು ಮತ್ತು ನನ್ನ ತಂಗಿ ಸೇರಿಕೊಂಡು 5 ನೇ ಪ್ರತಿವಾದಿಯ ಹೆಸರಿನಲ್ಲಿ ಕ್ರಯಪತ್ರ ಮಾಡಿಸಿರುತ್ತೇವೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ನಾನು ಪೂಜಯ್ಯ ಹಾಗೂ ಅವರ ಕುಟುಂಬದವರ ಜಿ ಪಿ ಎ ಹೋಲ್ಡರ್ ಆಗಿ ಮಾಡಿರುತ್ತೇನೆಂದರೆ ಸರಿ. ಸದರಿ

ದಾಖಲೆಯಲ್ಲಿ ಪೂಜಯ್ಯ ಹಾಗೂ ಅವರ ಕುಟುಂಬದವರನ್ನು ತೋರಿಸಿರುತ್ತೇನೆಂದರೆ ಸರಿ. ನಿಡಿ-3 ರಲ್ಲಿರುವ ಸಮ್ಮತಿಪತ್ರವು ನಿಡಿ-2 ರ ಕ್ರಯಪತ್ರವು ಆಗುವ ಸಮಯದಲ್ಲಿ ಬರೆಸಿಕೊಳ್ಳಲು ತೊಂದರೆ ಇತ್ತಾ ಎಂದರೆ ಆ ಸಮಯದಲ್ಲಿ ಪತ್ರವು ಬರೆಸಿಕೊಂಡಿರುತ್ತೇವೆ ಆದರೆ, ನೊಂದಣಿ ಮಾಡಿಸಲು ಆಗಿರುವುದಿಲ್ಲ.

ನಿಡಿ-2 ರಂತೆ ಕ್ರಯಪತ್ರವಾಗುವ ಸಮಯದಲ್ಲಿ ಪೂಜಯ್ಯ ರವರು ಬದುಕಿರುವುದಿಲ್ಲ. ಅವರು 2008 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ ಹಾಗೂ ದಿನಾಂಕ ನೆನಪು ಇರುವುದಿಲ್ಲ. ಜಿ ಪಿ ಎ ಮಾಡಿಕೊಟ್ಟ ನಂತರ 2-3 ದಿನಗಳ ನಂತರ ತೀರಿಕೊಂಡಿರುತ್ತಾರೆ. 2013 ರಲ್ಲಿ ಕ್ರಯಪತ್ರವಾದ ನಂತರ ಸಮ್ಮತಿಪತ್ರ ಬರೆದುಕೊಡಲು ಕೇಳಿಕೊಂಡಿರುತ್ತೇವೆ ಅದಕ್ಕೆ ಅವರು ರೂ.35,000/- ಕೊಟ್ಟರೆ ಬರೆದುಕೊಡುತ್ತೇವೆಂದು ತಿಳಿಸಿದ್ದು, ನಾವು ಅವರಿಗೆ ಹಣವನ್ನು ಕೊಟ್ಟು ನಿಡಿ-3 ರಂತೆ ಪತ್ರವನ್ನು ಬರೆಸಿಕೊಂಡಿರುತ್ತೇವೆ. ಸದರಿ ವಿಷಯವನ್ನು ನನ್ನ ವಾದಪತ್ರ ಹಾಗೂ ಸಾಕ್ಷ್ಯ ಪ್ರಮಾಣಪತ್ರದಲ್ಲಿ ತಿಳಿಸಿರುತ್ತೇನೆ.

ನಿಡಿ-3 ರಂತೆ ಸಮ್ಮತಿಪತ್ರ ಮಾಡಿಸಿಕೊಳ್ಳುವ ಸಮಯಕ್ಕೆ ಅವರಿಂದ ಪಹಣಿ, ವಿಭಾಗಪತ್ರ ಹಾಗೂ ಇತರೆ ದಾಖಲೆಗಳನ್ನು ಪಡೆದಿರುತ್ತೇನೆ. ಸದರಿ ದಿನದಂದು ವಾದಿಯು ಸಮ್ಮತಿಪತ್ರಕ್ಕೆ ಸಹಿ ಹಾಕಲು ಬಂದಿರುವುದಿಲ್ಲ ಹಾಗೂ ಸಹಿ ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ವಾದಿಯು ಊರಿನಲ್ಲಿ ಇಲ್ಲದೆ ಇದ್ದರೂ ಸಹ ಅವನ ಛಾಯಚಿತ್ರ ಹಾಗೂ ಹೆಬ್ಬಟಿನ ಗುರುತನ್ನು ಕೊಟ್ಟಿ ಮಾಡಿ ಹಾಗೂ ಕೊಟ್ಟಿ ಸಹಿ ಹಾಕಿ ಸುಳ್ಳು ದಾಖಲೆಯನ್ನು ಸೃಷಿಸಿಕೊಂಡಿರುತ್ತೇವೆಂದರೆ ಸರಿಯಲ್ಲ.

ದಾವಾಸ್ವತ್ತಿನಲ್ಲಿ ಈಗ ಪಾಯವನ್ನು ಹಾಕಿ ಶೆಡ್ ಹಾಕಿರುತ್ತೇವೆ. ನಿಡಿ-1 ರಂತೆ ಮಾಡಿಸಿಕೊಂಡ ಜಿ ಪಿ ಎ ಪತ್ರದಲ್ಲಿ 13.5 ಗುಂಟೆ ಜಾಗಕ್ಕೆ ಇರುತ್ತದೆ. 5 ನೇ ಪ್ರತಿವಾದಿಯು ಬಂದು ಸಾಕ್ಷಿ ಹೇಳಿದ್ದರೆ ಸತ್ಯ ಹೊರೆಗೆ ಬರುತ್ತದೆಂದು ಸುಳ್ಳು ಜಿ ಪಿ ಎ ಪಡೆದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 5 ನೇ ಪ್ರತಿವಾದಿಯ ಸುಳ್ಳು ವೈದ್ಯಕೀಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಿಡಿ-3 ನ್ನು ಸುಳ್ಳು ಸೃಷ್ಟಿಸಿಕೊಂಡು ನ್ಯಾಯಾಲಯದ ಮುಂದೆ ಸದರಿ ದಾಖಲೆಯನ್ನು ಅವರು ಬರೆದುಕೊಟ್ಟಿರುತ್ತಾರೆಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲಃ**

(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೊಡ್ಡಬಳ್ಳಾಪುರ.